**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಶೇ.75ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿದವರಿಗೆ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಕುರಿತು.

**ಓದಲಾಗಿದೆ:** 1.ಸರ್ಕಾರಿ ಆದೇಶ ಸಂಖ್ಯೆ: ಕಂಇ 134 ಎಂಎಸ್‌ಟಿ 2007, ದಿನಾಂಕ:10.09.2007.
2.ಸರ್ಕಾರಿ ಆದೇಶ ಸಂಖ್ಯೆ: ಕಂಇ 03 ಪಿಹೆಚ್‌ಪಿ 2008, ದಿನಾಂಕ:29.08.2008.
3.ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 74 ಡಿಎಸ್‌ಎಸ್‌ಪಿ 2013 ದಿನಾಂಕ:30.08.2013.
4.ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 47 ಡಿಎಸ್‌ಎಸ್‌ಪಿ 2013, ದಿನಾಂಕ:16.03.2018.

**ಪ್ರಸ್ತಾವನೆ:**

ಸರ್ಕಾರವು ವಿಶೇಷಚೇತನರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಶೇ.75ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಹೊಂದಿರುವ ವಿಶೇಷಚೇತನರಿಗೆ ಮೇಲೆ ಓದಲಾದ (1), (2) ಮತ್ತು (3) ರ ಸರ್ಕಾರಿ ಆದೇಶದಂತೆ ಕ್ರಮವಾಗಿ ರೂ.400/-,1000/- ಮತ್ತು ರೂ.1200/-ಗಳ ಮಾಸಿಕ ಪಿಂಚಣಿಯನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. ಮುಂದುವರೆದು ಓದಲಾದ (4) ರ ಸರ್ಕಾರಿ ಆದೇಶದನ್ವಯ ಸದರಿ ಮಾಸಾಶನವನ್ನು ರೂ.1200/- ರಿಂದ ರೂ.1400/- ಗಳಿಗೆ ಹೆಚ್ಚಿಸಿ ಆದೇಶಿಸಿಲಾಗಿರುತ್ತದೆ.

2021-22ರ ಆಯವ್ಯಯ ಘೋಷಣೆ ಕಂಡಿಕೆ 133 ರನ್ವಯ ಶೇ.75 ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಹೊಂದಿರುವವರಿಗೆ ಮಾಸಿಕ ಪಿಂಚಣಿಯನ್ನು ರೂ.2000/-ಗಳಿಗೆ ದಿನಾಂಕ:01.12.2021 ರಿಂದ ಜಾರಿಗೆ ಬರುವಂತೆ ಹೆಚ್ಚಿಸಲು ಸರ್ಕಾರವು ತೀರ್ಮಾನಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಡಿಎಸ್‌ಎಸ್‌ಪಿ -ಎಸ್‌ಸಿಎಸ್‌ಇ0-ಪಿಹೆಚ್‌ಪಿ/5/2021,**
**ಬೆಂಗಳೂರು, ದಿನಾಂಕ: 07ನೇ ಡಿಸೆಂಬರ್ 2021**

2021-22 ರ ಆಯವ್ಯಯ ಘೋಷಣೆ ಕಂಡಿಕೆ 133ರನ್ವಯ ಶೇ.75 ಕ್ಕಿಂತ ಹೆಚ್ಚು ಮನೋವೈಕಲ್ಯತೆ ಹೊಂದಿರುವವರಿಗೆ ಪ್ರಸ್ತುತ ನೀಡುತ್ತಿರುವ ಅಂಗವಿಕಲ ಮಾಸಾಶನವನ್ನು ರೂ.1400/- ಗಳಿಂದ ಮಾಸಾಶನವನ್ನು ರೂ.2000/- ಗಳಿಗೆ ಹೆಚ್ಚಿಸಿ ದಿನಾಂಕ:01.12.2021 ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ.

ಈ ಉದ್ದೇಶಕ್ಕಾಗಿ 2021-22ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2235-02-101-020-116 ಅಂಗವಿಕಲರಿಗೆ ಹಾಗೂ ಬಡ ಅಂಗವಿಕಲರಿಗೆ ಮಾಸಿಕ ಧನ ಸಹಾಯ- ಸಾಮಾಜಿಕ ಭದ್ರತೆ ಮತ್ತು ಪಿಂಚಣಿರಡಿ ಒದಗಿಸಿರುವ ರೂ.66038.00 ಲಕ್ಷಗಳಲ್ಲಿ ಉಳಿತಾಯವಾಗಿರುವ ರೂ.3699.47 ಲಕ್ಷಗಳಲ್ಲಿ ರೂ.2400.00ಲಕ್ಷಗಳನ್ನು ನಿರ್ದೇಶಕರು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ ಬೆಂಗಳೂರು ಇವರಿಗೆ ಬಿಡುಗಡೆ ಮಾಡಲಾಗಿದೆ.

ಈ ಆದೇಶದಲ್ಲಿನ ದಿನಾಂಕದಿಂದ ಹೆಚ್ಚಿಸಿರುವ ಮೊತ್ತವನ್ನು ವಿತರಿಸಲು ನಿದೇಶಕರು ಖಜಾನ ನಿರ್ದೇಶನಾಲಯ ಹಾಗೂ ಜಿಲ್ಲಾ ಖಜಾನಾಧಿಕಾರಿಗಳು /ಉಪಖಜಾನಾಧಿಕಾರಿಗಳು ಇವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

......2

Scanned with CamSca

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-02-101-0-20-116 ಅಂಗವಿಕಲರಿಗೆ ಹಾಗೂ ಬಡಅಂಗವಿಕಲರಿಗೆ ಮಾಸಿಕ ಧನಸಹಾಯ-ಸಾಮಾಜಿಕ ಭದ್ರತೆ ಪಿಂಚಣಿ- Monthly Financial Assistance to the Physically Challenged and the Disabled Poor (NSAP)ರಡಿ ಭರಿಸತಕ್ಕದ್ದು ಹಾಗೂ ಈ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನವನ್ನು ಬಿಡುಗಡೆಗೊಳಿಸಿರುವ ಉದ್ದೇಶಕ್ಕಾಗಿಯೇ ಬಳಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 564 ವೆಚ್ಚ-7/2021, ದಿ:02.12.2021ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರಹೆಸರಿನಲ್ಲಿ

07/12/2021
(ಜಯಲಕ್ಷ್ಮಿ)
ಸರ್ಕಾರದ ಉಪ ಕಾರ್ಯದರ್ಶಿ,
(ಕಂದಾಯ ಇಲಾಖೆ (ಸೇವೆಗಳು-3, ಕೆ.ಎ.ಟಿ.
ಬಾನಿ, ಭೂ.ಸು.ಕೋ &ಸಾ.ಭ ಮತ್ತುಪಿಂಚಣಿ)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌದ, ಬೆಂಗಳೂರು ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ 100 ಪ್ರತಿಗಳನ್ನು ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

**ಪ್ರತಿಯನ್ನು:**

1. ಮಹಾಲೇಖಪಾಲರು [ಲೆಕ್ಕಪತ್ರ & ಲೆಕ್ಕ ತಪಾಸಣೆ], [ಎ & ಇ] ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು,
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು [ಆಯವ್ಯಯ & ಸಂಪನ್ಮೂಲ] ವಿಧಾನಸೌಧ, ಬೆಂಗಳೂರು.
7. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗ.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಮಾನ್ಯ ಕಂದಾಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ, ವಿಧಾನಸೌಧ, ಬೆಂಗಳೂರು.
10. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, [ವೆಚ್ಚ-7], ವಿಧಾನಸೌಧ, ಬೆಂಗಳೂರು.
13. ಎಲ್ಲಾ ಉಪವಿಭಾಗಾಧಿಕಾರಿಗಳು / ತಹಸೀಲ್ದಾರ್‌ರು.
14. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
15. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ.

Scanned with CamScanner